

ನಕ್ಕುಬಿಡಿ

### ಶಿಕ್ಷೆ!

ದೇವರು ದಯಾಮಯಿ; ನಾವು ಜೀವನದಲ್ಲಿ ಸಾವಿರ ಸಲ ತಪ್ಪೆಸಗಿದರೂ ಅವನು ನಮ್ಮನ್ನು ಪ್ರತೀ ಬಾರಿ ಶಿಕ್ಷಿಸುವುದಿಲ್ಲ; ಕೇವಲ ಒಂದೇ ಒಂದು ಬಾರಿ ಮದುವೆ ಮಾಡಿಸಿಬಿಡುತ್ತಾನೆ!

### ವರ್ಕ್‌ಶಾಪ್

ವೈವಾಹಿಕ ಜೀವನವೊಂದು ವರ್ಕ್ ಶಾಪ್‌ನ ಹಾಗೆ; ಏಕೆಂದರೆ ವಿವಾಹ ನಂತರ ಗಂಡ 'ವರ್ಕ್' ಮಾಡುತ್ತಾ ಇರುತ್ತಾನೆ ಮತ್ತು ಹೆಂಡತಿ 'ಶಾಪ್' ಮಾಡುತ್ತಾ....!



### ಚಿಂತೆ

ಸ್ತ್ರೀಯರು ಸದಾ ಪುರುಷರ ಮರೆಗುಳಿ ತನದ ಬಗ್ಗೆ ಚಿಂತಿಸುತ್ತಾರೆ, ಆದರೂ ಪುರುಷರು ಸದಾ ಸ್ತ್ರೀಯರ ನೆನಪಿನ ಶಕ್ತಿಯ ಬಗ್ಗೆ ಚಿಂತಿಸುತ್ತಿರುತ್ತಾರೆ!

### ಅಂತಿಮ ಪದ

ಭಾರೀ ಜಗಳದ ಬಳಿಕ,

ಪತ್ನಿ: ನಾನೀಗ ನಿಮ್ಮ ಬಾಯಿಂದ ಕಟ್ಟ ಕಡೆಯ ಪದವನ್ನು ಆಲಿಸಲಿಚ್ಛಿಸುತ್ತೇನೆ. ಆ ನಂತರ ಶಾಶ್ವತವಾಗಿ ನಾನು ತವರು ಮನೆಗೆ ಹೊರಟುಬಿಡುತ್ತೇನೆ...

ಪತಿ: 'ಟ್ಯಾಂಕ್ಸ್!'

### ಯೋಜನೆ

ರಜಾ ದಿನಗಳನ್ನು ಹೇಗೆ ಕಳೆಯುವುದು ಎನ್ನುವುದರ ಚಿಂತೆಯೇ?

ಯೋಚಿಸದಿರಿ, ಪತಿ 'ಯಾವಾಗ' ಎಂಬುವುದನ್ನು ತಿಳಿಸಿದರೆ ಸಾಕು; 'ಎಲ್ಲಿಗೆ?' ಎನ್ನುವುದನ್ನು ತಕ್ಷಣವೇ ಪತ್ನಿ ನಿರ್ಧರಿಸಿ ಬಿಡುತ್ತಾಳೆ!

### ಸಮಾನತೆ!

'ನಾನು ಹದಿನೈದು ನಿಮಿಷಗಳಲ್ಲಿ ತಯಾರಾಗಿ ಹೊರಡುತ್ತೇನೆ' ಎನ್ನುವ ಪತ್ನಿ ಆನಂತರ ಹೊರಡಲು ತೆಗೆದುಕೊಳ್ಳುವ ನಿಜವಾದ ಸಮಯ ಹಾಗೂ 'ನಾನಿನ್ನು ಹದಿನೈದು ನಿಮಿಷಗಳಲ್ಲಿ ಮನೆಗೆ ತಲುಪುತ್ತೇನೆ' ಎಂದನ್ನುವ ಪತಿ ಆನಂತರ ಮನೆ ತಲುಪಲು ತೆಗೆದುಕೊಳ್ಳುವ ನಿಜವಾದ ಕಾಲಾವಧಿ– ಇವೆರಡೂ ಸರಿ ಸಮವಾಗಿರುತ್ತವೆ!

### ಊಟ

ಗಂಡ: ಹೆಂಡತಿಯ ನಡುವೆ ಜಗಳವಾದ ನಂತರ ಗಂಡ ಮನೆಯಿಂದ ಹೊರ ನಡೆದುಬಿಟ್ಟನು. ರಾತ್ರಿ ಮನೆಗೆ ಫೋನಾಯಿಸಿ ವಿಚಾರಿಸಿದ, 'ಊಟಕ್ಕೇನಿದೆ?'

ಹೆಂಡತಿ: ವಿಷ.

ಗಂಡ: ನಾನು ಬರುವುದು ತಡವಾಗುತ್ತದೆ; ನೀನು ತಿಂದು ಮಲಗಿಬಿಡು!

### ಪರಿಹಾರ

ಅರ್ಧ ರಾತ್ರಿಯಲ್ಲಿ ಗೋಪಿ ಎದುಸಿರುಬಿಡುತ್ತಾ ತನ್ನ ಗಜ ಗಾತ್ರದ ಪತ್ನಿಗೆ ಹೀಗೆ ಕೇಳಿದ, 'ನರಳಿ ನರಳಿ ನಿಧಾನ ಸಾಯುವುದು ಒಳ್ಳೆಯದೋ ಅಥವಾ ಗೊಟಕ್ಕಂತ ಒಂದೇ ಬಾರಿಗೆ ಸಾಯುವುದು ಒಳ್ಳೆಯದೋ?'

ಹೆಂಡತಿ: ಒಂದೇ ಬಾರಿಗೆ...


ಗೋಪಿ: ಹಾಗಾದರೆ ನಿನ್ನ ಇನ್ನೊಂದು ಕಾಲನ್ನೂ ನನ್ನ ಮೇಲೆ ಇಟ್ಟುಬಿಡು!

### ಪಶ್ಚಾತ್ತಾಪ!

ಪತಿ (ಜಗಳದ ನಂತರ): ನಿನ್ನನ್ನು ಮದುವೆಯಾಗುವಾಗ ನಾನೊಬ್ಬ ಮೂರ್ಖನಾಗಿದ್ದೆ...

ಪತ್ನಿ: ಹೌದು, ಆದರೆ ನಾನು ನಿಮ್ಮನ್ನು ತುಂಬಾ ಪ್ರೀತಿಸುತ್ತಿದ್ದುದರಿಂದ ಆಗ ಅದು ನನ್ನ ಗಮನಕ್ಕೇ ಬಂದಿರಲಿಲ್ಲ!

–ರಮಣಶೆಟ್ಟಿ ರೆಂಜಾಳ್ ಮುಂಬೈ

Doctor's consultation at Baidyanath Clinic, Civil Lines, Nagpur. Mob. 8888977368